## ದೇಶದ ಮಾಲಿನ್ಯ ನಗರಗಳಲ್ಲಿ ಬೆಂಗಳೂರಿಗೆ 5 ನೇ ಸ್ಥಾನ: ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ವರದಿ

# ಮಲಿನಗೊಂಡ ಉದ್ಯಾನ ನಗರಿ




ಅನುಪಮಾ ಫಾಸಿ

**ಬೆಂಗಳೂರು:** ಬೆಂಗಳೂರು ನಗರ ಮಾಲಿನ್ಯದಲ್ಲಿ ದೇಶದ ಐದನೇ ಸ್ಥಾನದಲ್ಲಿದ್ದು, ಮಾಲಿನ್ಯ ನಗರಿ ಎಂಬ ಕುಖ್ಯಾತಿಯ ಪಟ್ಟಿಗೆ ಸೇರಿದೆ.

ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) ನಡೆಸಿರುವ ಅಧ್ಯಯನ ವರದಿಯಲ್ಲಿ ಈ ಅಂಶವು ಬಹಿರಂಗವಾಗಿದೆ. 10 ಮಾಲಿನ್ಯ ನಗರಗಳಲ್ಲಿ ಬೆಂಗಳೂರು ನಗರ 5 ನೇ ರ್‍ಯಾಂಕ್‌ನಲ್ಲಿದೆ.

'ನವೀಕರಿಸಬಹುದಾದ ಮತ್ತು ಸುಸ್ಥಿರ ಇಂಧನ'- ಹೆಸರಿನ ವರದಿಯನ್ನು ಐಐಎಸ್‌ಸಿಯ ವಿದ್ಯಾರ್ಥಿಗಳ ತಂಡ ಸಿದ್ಧಪಡಿಸಿದೆ.

ಐಐಎಸ್‌ಸಿಯ ಪರಿಸರ ವಿಜ್ಞಾನ ಕೇಂದ್ರದ ಪ್ರಾಧ್ಯಾಪಕ ಪ್ರೊ.ಟಿ.ವಿ. ರಾಮಚಂದ್ರ ಅವರ ಮಾರ್ಗ ದರ್ಶನದಲ್ಲಿ ಈ ಅಧ್ಯಯನ ನಡೆಸ ಲಾಗಿದ್ದು, ದೇಶದ 10 ಮಹಾನಗರಗಳಲ್ಲಿ ವಿದ್ಯಾರ್ಥಿಗಳ ತಂಡವು ಅಧ್ಯಯನ ನಡೆಸಿದೆ.

ಈ ತಂಡವು ದೆಹಲಿ, ಮುಂಬೈ, ಕೋಲ್ಕತ್ತ, ಬೆಂಗಳೂರು, ಹೈದರಾಬಾದ್, ಅಹಮದಾಬಾದ್, ಕೊಯಮತ್ತೂರು, ಭೋಪಾಲ್, ಪುಣೆ ಮತ್ತು ಕೊಚ್ಚಿ ನಗರಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿತ್ತು.


ಈ ಅಧ್ಯಯನ ವರದಿ ಪ್ರಕಾರ ದೆಹಲಿ ದೇಶದಲ್ಲೇ ಅತಿ ಹೆಚ್ಚು ಮಲಿನ ಗೊಂಡಿರುವ ನಗರವಾಗಿದೆ. ಎರಡನೇ ಸ್ಥಾನದಲ್ಲಿ ಮುಂಬೈ ನಗರವಿದ್ದರೆ, ಕೋಲ್ಕತ್ತ ಮೂರನೇ ಸ್ಥಾನ ಮತ್ತು ಚೆನ್ನೈ ನಾಲ್ಕನೇ ಸ್ಥಾನದಲ್ಲಿವೆ. ಬೆಂಗಳೂರು ಐದನೇ ಸ್ಥಾನದಲ್ಲಿದೆ.

ಬೆಂಗಳೂರಿನಲ್ಲಿ ಸಾರಿಗೆ ವ್ಯವಸ್ಥೆಯಿಂದಲೇ ಹೆಚ್ಚು ಹಸಿರು ಮನೆ ಪರಿಣಾಮ ಉಂಟಾಗುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಶೀಘ್ರದಲ್ಲೇ ಈ ವರದಿಯನ್ನು ಪ್ರಕಟಿಸಿ, ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಅಧ್ಯಯನ ತಂಡ ಸಿದ್ಧತೆ ನಡೆಸಿದೆ. 'ಕಾರ್ಖಾನೆಗಳಿಂದ ಆಗುವ ಮಾಲಿನ್ಯ, ವಿದ್ಯುತ್ ಉಪಕರಣಗಳಿಂದ ಬಿಡುಗಡೆಯಾಗುವ ಉಷ್ಣಾಂಶ, ವಾಹನಗಳಿಂದ ಉಂಟಾಗುವ ಮಾಲಿನ್ಯ, ಗೃಹ ಬಳಕೆ, ಕೈಗಾರಿಕೆ, ನಗರೀಕರಣವನ್ನು ಆಶ್ರಯಿಸಿ ವರದಿ ತಯಾರಿಸಲಾಗಿದೆ. 2009ರಿಂದ 2014ರ ಅವಧಿಯಲ್ಲಿ ದೇಶದ 10 ಮಹಾನಗರಗಳಲ್ಲಿ ಆಗಿರುವ ಮಾಲಿನ್ಯದ ಬಗ್ಗೆ ಅಧ್ಯಯನ ನಡೆಸಲಾಗಿದೆ' ಎಂದು ಪ್ರೊ.ಟಿ.ವಿ.ರಾಮಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಕಳೆದ ಐದು ವರ್ಷಗಳಲ್ಲಿ ಇಂಗಾಲದ ಡೈ ಆಕ್ಸೈಡ್ ಪ್ರಮಾಣ, ಮಿಥೇನ್ ಪ್ರಮಾಣ ಹಾಗೂ ನೈಟ್ರಸ್ ಆಕ್ಸೈಡ್ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಯಾವ ಮೂಲಗಳಿಂದ ಇವುಗಳ ಪ್ರಮಾಣ ಹೆಚ್ಚಾಗಿದೆ ಎಂಬುದನ್ನು ಕೂಡ ಅಧ್ಯಯನ ಮಾಡಲಾಗಿದೆ' ಎಂದರು.


'ಬೆಂಗಳೂರಿನಲ್ಲಿ ಘನ ಮತ್ತು ದ್ರವ ತ್ಯಾಜ್ಯದ ಸರಿಯಾದ ನಿರ್ವಹಣೆ ಆಗುತ್ತಿಲ್ಲ. ಇದರಿಂದ ಬೆಂಗಳೂರಿನಲ್ಲಿ ಮಿಥೇನ್ ಪ್ರಮಾಣ ಹೆಚ್ಚುತ್ತಿದೆ. ಒಳಚರಂಡಿಯ ತ್ಯಾಜ್ಯವೂ ಹೆಚ್ಚು ಸಮಯ ತೆರೆದ ಜಾಗಗಳಲ್ಲಿ ಶೇಖರಗೊಳ್ಳುವುದು ಕೂಡಾ ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗುತ್ತದೆ. ಹೀಗಾಗಿ ಎಲ್ಲ ರೀತಿಯಿಂದಲೂ ಸ್ವಚ್ಛತೆಯಾಗಬೇಕಿದೆ. ಈ ನಿಟ್ಟಿನಲ್ಲಿ ಸ್ವಚ್ಛ ಭಾರತ ಅಭಿಯಾನವನ್ನು ಸರಿಯಾಗಿ ಅನುಷ್ಠಾನಕ್ಕೆ ತರಬೇಕು' ಎನ್ನುತ್ತಾರೆ ಅವರು

'ಉದ್ಯಾನ ನಗರಿಯಾಗಿದ್ದ ಬೆಂಗಳೂರು ನಗರ ಇಂದು ಮಾಲಿನ್ಯ ನಗರಿಯಾಗುತ್ತಿದೆ. ಈಗಲೇ ಎಚ್ಚೆತ್ತುಕೊಂಡು ಮಾಲಿನ್ಯವನ್ನು ಕಡಿಮೆ ಮಾಡಬೇಕಾಗಿದೆ. ಇಲ್ಲಿ ಸರ್ಕಾರದ ಜತೆಗೆ ಸಂಘ ಸಂಸ್ಥೆಗಳು, ಜನಸಾಮಾನ್ಯರೂ ಸಹ ಪ್ರಯತ್ನಿಸಬೇಕಾಗಿದೆ' ಎಂದು ಸಲಹೆ ನೀಡಿದರು.




### ವಿದ್ಯುತ್‌ಬಳಕೆಯಿಂದ ನಗರಗಳಲ್ಲಿ ಹಸಿರು ಮನೆ ಪರಿಣಾಮ (ಗೀಗಾ ಪ್ರಮಾಣ)

| ನಗರಗಳು | ವಾಣಿಜ್ಯ | ಶೇಕಡ | ಮತ್ತಿತರೆ | ಶೇಕಡ | ಬಳಕೆ, ವಿತರಣೆ ನಷ್ಟ | ಶೇಕಡ |
|---|---|---|---|---|---|---|
| ನವದೆಹಲಿ | 5428.55 | 29.66 | 2099.11 | 36.51 | 857.69 | 27.07 |
| ಮುಂಬೈ | 4049.85 | 22.13 | 1291.49 | 22.46 | 1247.54 | 39.38 |
| ಕೋಲ್ಕತ್ತ | 1746.34 | 9.54 | 777.46 | 13.52 | 269.43 | 8.50 |
| ಚೆನ್ನೈ | 2859.07 | 15.62 | 624.18 | 10.86 | 375.61 | 11.86 |
| ಬೆಂಗಳೂರು | 2456.80 | 13.43 | 603.46 | 10.50 | 24.85 | 0.78 |
| ಹೈದರಾಬಾದ್ | 870.4 | 4.76 | 165.74 | 2.88 | – | – |
| ಅಹಮದಾಬಾದ್ | 888.73 | 4.86 | 188.09 | 3.27 | 392.85 | 12.40 |




**'ಈಗಲೇ ಎಚ್ಚೆತ್ತುಕೊಳ್ಳುವುದು ಅಗತ್ಯ'**

ವಿಶ್ವದಲ್ಲೇ ಅತಿ ಹೆಚ್ಚು ಮಲಿನಗೊಂಡಿರುವ ನಗರಿ ಬೀಜಿಂಗ್. ಅದೇ ಮಾದರಿಯಲ್ಲಿ ಬೆಂಗಳೂರು ಕೂಡ ಮಲಿನವಾಗುತ್ತಿದೆ. ಈ ಬಗ್ಗೆ ಈಗಲೇ ಎಚ್ಚೆತ್ತು, ಕ್ರಮ ಕೈಗೊಳ್ಳದೆ ಇದ್ದರೆ ಬೆಂಗಳೂರು ಮಲಿನಗೊಂಡ ನಗರಗಳ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರುತ್ತದೆ
**ಪ್ರೊ.ಟಿ.ವಿ. ರಾಮಚಂದ್ರ**


### ತ್ಯಾಜ್ಯ ವಲಯ: ಹಸಿರು ಮನೆ ಪರಿಣಾಮ (ಗೀಗಾ ಪ್ರಮಾಣ)

| ನಗರಗಳು | ಘನ ತ್ಯಾಜ್ಯ ವಿಲೇವಾರಿ | ಶೇಕಡ | ಗೃಹಬಳಕೆ ತ್ಯಾಜ್ಯ | ಶೇಕಡ |
|---|---|---|---|---|
| ನವದೆಹಲಿ | 853.19 | 23.13 | 1378.75 | 28 |
| ಮುಂಬೈ | 869.92 | 23.59 | 1058.09 | 21.49 |
| ಕೋಲ್ಕತ್ತ | 535.33 | 14.51 | 385.03 | 7.82 |
| ಚೆನ್ನೈ | 428.27 | 11.61 | 394.24 | 8.01 |
| ಬೆಂಗಳೂರು | 374.73 | 10.16 | 759.29 | 15.42 |
| ಹೈದರಾಬಾದ್ | 406.85 | 11.03 | 513.56 | 10.43 |
| ಅಹಮದಾಬಾದ್ | 219.89 | 5.96 | 434.34 | 8.82 |

### ಗೀಗಾ ಪ್ರಮಾಣ (–10⁹)

ಒಂದು ಸಾವಿರ ಟನ್‌ಗೆ ಒಂದು ಗೀಗಾ ಗ್ರಾಂ. ಭೂಮಿಯ ಉಷ್ಣವನ್ನು ಹೆಚ್ಚಿಸುವ ಅನಿಲಗಳ ಪ್ರಮಾಣವನ್ನು ಅಳತೆ ಮಾಡಲು ಬಳಸುವ ಒಂದು ಮಾಪನ. ಅಂತರ ರಾಷ್ಟ್ರೀಯಮಾನ್ಯತೆ ಪಡೆದಿದೆ.





ಪ್ರಜಾ ಗ್ರಾಫಿಕ್ಸ್ ಗಣೇಶ ಆರ್.ಅರಕೆರೆ

## ಕಲಿಕಾ ಮಾಧ್ಯಮ ಜಾರಿ: ಸಚಿವ ಅನಂತ ಕುಮಾರ್ ಅಭಿಪ್ರಾಯ

# ಭಗೀರಥ ಪ್ರಯತ್ನ ಮಾಡೋಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಮ್ಮ ಭಾಷಾ ಸಂಸ್ಕೃತಿ ಮತ್ತು ದೇಸೀಯ ಭಾಷೆಗಳು ಉಳಿಯ ಬೇಕಾದರೆ ಮಾತೃಭಾಷೆಯೇ ಕಲಿಕೆಯ ಮಾಧ್ಯಮವಾಗಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಇದನ್ನು ಜಾರಿಗೆ ತರಲು ನಾವೆಲ್ಲ ಭಗೀರಥ ಪ್ರಯತ್ನ ಮಾಡೋಣ' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಅನಂತಕುಮಾರ್ ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ವಿಶ್ವಕನ್ನಡಿಗರ ಜಾಗೃತಿ ಸಮಾವೇಶ'ದಲ್ಲಿ ಅವರು ಮಾತನಾಡಿದರು.

'ಮಾತೃಭಾಷೆ ಕಲಿಕೆಯ ಮಾಧ್ಯಮವಾಗಬೇಕು ಎಂಬ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾಗಳ ನಡುವೆ ಭಿನ್ನಾಭಿಪ್ರಾಯಗಳಿಲ್ಲ. ಆದ್ದರಿಂದ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವಿಚಾರವನ್ನು ರಾಷ್ಟ್ರೀಯ ಭಾವೈಕ್ಯ ಮಂಡಳಿ ಸಭೆಯಲ್ಲಿ ಪ್ರಸ್ತಾಪಿಸಲಿ. ನಾನು ಕೂಡಾ ಪ್ರಧಾನಿ, ಗೃಹ ಸಚಿವರು ಮತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಮನವೊಲಿಸುವ ಕೆಲಸ ಮಾಡುತ್ತೇನೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರೊಂದಿಗೆ ಶಾಸಕ ಭೈರತಿ ಬಸವರಾಜು, ಕರವೇ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ, ಆದಿ ಚುಂಚನಗಿರಿ ಮಹಾಸಂಸ್ಥಾನದ ನಿರ್ಮಲಾನಂದನಾಥ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಆರ್.ಕೆ.ನಲ್ಲೂರು ಪ್ರಸಾದ್, ಪತ್ರಕರ್ತ ಎಚ್.ಆರ್.ರಂಗನಾಥ್, ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ, ಲೋಕೋಪಯೋಗಿ ಸಚಿವ ಎಚ್.ಸಿ.ಮಹದೇವಪ್ಪ ಇದ್ದಾರೆ –**ಪ್ರಜಾವಾಣಿ ಚಿತ್ರ**

ಕೇಂದ್ರ ಕಾನೂನು ಸಚಿವ ಡಿ.ವಿ. ಸದಾನಂದಗೌಡ ಅವರು ಮಾತನಾಡಿ, 'ಕಲಿಕಾ ಮಾಧ್ಯಮ ವಿಚಾರವಾಗಿ ಕೇಂದ್ರದ ವರಿಷ್ಠರ ಜತೆ ಚರ್ಚಿಸುತ್ತೇನೆ. ಈ ಸಮಸ್ಯೆಗೆ ಚರ್ಚೆಯ ಮೂಲಕ ಪರಿಹಾರ ಕಂಡುಕೊಳ್ಳೋಣ' ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಲೋಕೋಪಯೋಗಿ ಸಚಿವ ಎಚ್.ಸಿ. ಮಹದೇವಪ್ಪ ಅವರು ಮಾತನಾಡಿ, 'ಮೇಕೆದಾಟು ಯೋಜನೆ ವಿಚಾರದಲ್ಲಿ ಸರ್ಕಾರದ ನಿಲುವು ಅಚಲವಾಗಿದೆ. ಅಗತ್ಯ ಬಿದ್ದರೆ ಸರ್ಕಾರ ಕಠಿಣ ತೀರ್ಮಾನಗಳನ್ನು ತೆಗೆದುಕೊಳ್ಳುತ್ತದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಚಂದ್ರಶೇಖರ ಕಂಬಾರ ಅವರಿಗೆ 'ವಿಶ್ವಮಾನವ ರಾಷ್ಟ್ರಕವಿ ಕುವೆಂಪು', ಪತ್ರಕರ್ತ ರಂಜಾನ್ ದರ್ಗಾ ಅವರಿಗೆ 'ಜಗಜ್ಯೋತಿ ಶ್ರೀ ಬಸವೇಶ್ವರ', ನಟಿ ಬಿ.ಸರೋಜಾದೇವಿ ಅವರಿಗೆ 'ವರನಟ ಡಾ.ರಾಜ್‌ಕುಮಾರ್', ಜನಪದ ಕಲಾವಿದೆ ಸುಕ್ರಿ ಬೊಮ್ಮಗೌಡ ಅವರಿಗೆ 'ಎಸ್.ಕೆ.ಕರೀಂ ಖಾನ್', ಪತ್ರಕರ್ತ ಕೆ.ಸತ್ಯನಾರಾಯಣ ಅವರಿಗೆ 'ಕೆ.ಶ್ಯಾಮರಾವ್', ಹಿರಿಯ ರಾಜಕಾರಣಿ ಎಂ.ವಿ.ರಾಜಶೇಖರನ್ ಅವರಿಗೆ 'ಶಾಂತವೇರಿ ಗೋಪಾಲಗೌಡ' ಮತ್ತು ರೈತಪರ ಹೋರಾಟಗಾರ ಕೆ.ಟಿ.ಗಂಗಾಧರ ಅವರಿಗೆ 'ಪ್ರೊ.ಎಂ.ಡಿ.ನಂಜುಂಡಸ್ವಾಮಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿಗಳು ತಲಾ ₹ 50 ಸಾವಿರ ನಗದು ಪುರಸ್ಕಾರ ಹೊಂದಿವೆ.

ಕಲಿಕಾ ಮಾಧ್ಯಮ ವಿಷಯವಾಗಿ ಬರುವ ಸಂಸತ್ತಿನ ಅಧಿವೇಶನದಲ್ಲಿ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಭರವಸೆ ನೀಡಿದ್ದಾರೆ.
**ಚಂದ್ರಶೇಖರ ಕಂಬಾರ**
ಸಾಹಿತಿ



**ಅಡಚಣೆ**

ಸೋಮವಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ಆರಂಭವಾಗಲಿದ್ದು, ಬನಶಂಕರಿಯ ಬಿಎಂಎಸ್ ಶಾಲೆಯ ಬಳಿ ರಸ್ತೆ ಕಾಮಗಾರಿ ಪೂರ್ಣಗೊಳ್ಳದಿರುವುದರಿಂದ ಪರೀಕ್ಷಾ ಕೇಂದ್ರವಾದ ಬಿಎಂಎಸ್ ಶಾಲೆಗೆ ತಲುಪಲು ವಿದ್ಯಾರ್ಥಿಗಳಿಗೆ ತೊಂದರೆಯಾಗಲಿದೆ

–**ಪ್ರಜಾವಾಣಿ ಚಿತ್ರ**

## ನಗರದಲ್ಲಿ 'ಅರ್ಥ್ ಅವರ್' ಆಚರಣೆ

# 43 ಮೆ.ವ್ಯಾ ವಿದ್ಯುತ್ ಉಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಾದ್ಯಂತ ಶನಿವಾರ ರಾತ್ರಿ 8.30 ರಿಂದ 9.30ರ ವರೆಗೆ ಆಚರಿಸಿದ 'ಅರ್ಥ್ ಅವರ್'ನಿಂದ ಕೇವಲ 43 ಮೆ.ವ್ಯಾ ವಿದ್ಯುತ್ ಉಳಿಕೆಯಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಬರೀ ಒಂದು ಮೆ.ವ್ಯಾಟ್ ಮಾತ್ರ ಹೆಚ್ಚು ಉಳಿಸಿದಂತಾಗಿದೆ.

ಬೆಸ್ಕಾಂ ಈ ಬಾರಿಯ 'ಅರ್ಥ್ ಅವರ್' ವೇಳೆಯಲ್ಲಿ 80–100 ಮೆ.ವ್ಯಾ ವಿದ್ಯುತ್ ಉಳಿಸುವ ಗುರಿ ಇಟ್ಟುಕೊಂಡಿತ್ತು.

ನೈಸರ್ಗಿಕ ಸಂಪತ್ತು ಮತ್ತು ಭೂಮಿಯ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ದಿಸೆಯಲ್ಲಿ ಆಚರಿಸುವ 'ಅರ್ಥ್ ಅವರ್' ಮಹತ್ವ ಕುರಿತು ನಗರದ ನಾಗರಿಕರಿಗೆ ಅನೇಕ ಸಂಘ ಸಂಸ್ಥೆಗಳು, ಪರಿಸರವಾದಿಗಳು ತಿಳಿವಳಿಕೆ ಮೂಡಿಸಲು ಪ್ರಯತ್ನಿಸಿದ್ದರು. ಆದರೆ, ಫಲಿತಾಂಶ ಮಾತ್ರ ಪರಿಣಾಮಕಾರಿಯಾಗಿ ಕಂಡುಬರಲಿಲ್ಲ.

ಬಹುತೇಕ ಸರ್ಕಾರಿ ಕಚೇರಿಗಳಲ್ಲಿ 'ಅರ್ಥ್ ಅವರ್' ಸಮಯದಲ್ಲಿ ವಿದ್ಯುತ್ ದೀಪಗಳನ್ನು ಆರಿಸಲಾಗಿತ್ತು. ಆದರೆ, ವಾರಾಂತ್ಯವಾದ ಕಾರಣ ಕಾರ್ಖಾನೆಗಳು, ವಾಣಿಜ್ಯ ಮಳಿಗೆಗಳು ಮತ್ತು ಬೃಹತ್ ಮಾಲ್‌ಗಳಲ್ಲಿ 'ಅರ್ಥ್ ಅವರ್' ಆಚರಿಸಲಿಲ್ಲ.


Printed and published by S.V.Srinivasan on behalf of The Printers ( Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. Editor: **K.N. Shanth Kumar**. Editorial Office: 75, M.G.Road, Bengaluru- 560 001. E-mail: editorpv@prajavani.co.in.
Phone: 25880000, Fax: 25880618, Editorial: 25880607, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited.